**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ**

**ಕೆ ಆರ್ ನಗರ.**

**ಸಿ.ಸಿ. ನಂ. 37/2026**

ಪಿರ್ಯಾದಿ ಃ ಸರ್ಕಾರದ ಪರ ಕೆ ಆರ್ ನಗರ ಪೋಲೀಸ್ ಠಾಣೆ

ಃವಿರುದ್ಧ ಃ

ಆರೋಪಿ ಃ ಕುಮಾರ ಎಮ್.ಜಿ. ಬಿನ್ ಲೇಟ್ ಗೋಪಾಲಶೆಟ್ಟಿ
38 ವರ್ಷ
ವಾಸಃ ಮಾರಗೌಡನಹಳ್ಳಿ ಗ್ರಾಮ,
ಕೆ.ಆರ. ನಗರ ತಾಲ್ಲೂಕು,
ಮೈಸೂರು ಜಿಲ್ಲೆ.

**ದೋಷಾರೋಪಣೆ**

ಶ್ರೀ ಚಂದನ್.ಎಸ್ ಬಿ.ಕಾಮ್.,ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿ ನಾಯಾಧೀಶರು, ಕೆ.ಆರ್.ನಗರ ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಿಸುವುದೇನೆಂದರೆಃ

ದಿನಾಂಕಃ 29-09-2025 ರಂದು ಮದ್ಯಾಹ್ನ 12.30 ಗಂಟೆ ಸಮಯದಲ್ಲಿ ಕೆ ಆರ್ ನಗರ ಪೊಲೀಸ್ ಠಾಣಾ ಸರಹದ್ದು ಕಂಚಿನಕೆರೆ ಹಾಗೂ ಮಾರಗೌಡನಹಳ್ಳಿ ಗ್ರಾಮದ ಮುಖ್ಯ ರಸ್ತೆಯಲ್ಲಿರುವ ದೇವರಾಜು ಚಿಕ್ಕೇಗೌಡರ ಜಮೀನು ಹಾಗೂ ಲಕ್ಷ್ಮಮ್ಮ ರವರ ಜಮೀನು ಮಧ್ಯೆ ಇರುವ ಡಾಂಬಾರು ರಸ್ತೆಯ ಎಡ ಬದಿಯಲ್ಲಿ ಚಾಸಾ-2 ದೇವೆಂದ್ರಶೆಟ್ಟಿ ರವರು ನಡೆದುಕೊಂಡು ಹೋಗುತ್ತಿರುವಾಗ ಆರೋಪಿಯಾದ ನೀವು ವಾಹನ ಸಂಖ್ಯೆ ಕೆಎ-09-ಜೆಟಿ-3059 ಹೀರೋ ಸ್ಲೆಂಡರ್ ಬೈಕ್ ನ್ನು ಕಂಚಿನಕೆರೆ ಕಡೆಯಿಂದ ಮಾರಗೌಡನಹಳ್ಳಿ ಗ್ರಾಮದ ಕಡೆಗೆ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ-2 ರವರಿಗೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **281** ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರಿ ಎಂದು ಆರೋಪಣೆ ಹೊರಿಸಲಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ತಾರೀಖು, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ವಾಹನ ಸಂಖ್ಯೆ ಕೆಎ-09-ಜೆಟಿ-3059 ಹೀರೋ ಸ್ಲೆಂಡರ್ ಬೈಕ್ ನ್ನು ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ-2 ರವರಿಗೆ ಡಿಕ್ಕಿ ಪಡಿಸಿದ ಪರಿಣಾಮ ಚಾಸಾ-2 ರವರು ಬೈಕ್ ನಿಂದ ಕೆಳಗೆ ಬಿದ್ದು ಚಾಸಾ-2 ರವರ ಬಲಕೈನ ಭುಜದ ಭಾಗದ ಮೂಳೆ ಮುರಿತ ಹಾಗೂ ಬಲಭಾಗದ ಪಕ್ಕೆ ಭಾಗದ ಮೂಳೆಗೆ ಸೊಂಟದ ಭಾಗಕ್ಕೆ ಹಾಗೂ ಬೆನ್ನಿನ ಭಾಗಕ್ಕೆ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ. ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ **ಕಲಂ 125(ಬಿ)** ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರಿ ಎಂದು ಆರೋಪಣೆ ಹೊರಿಸಲಾಗಿದೆ.

ಪ್ರಃ 1) ಕನ್ನಡದಲ್ಲಿ ಓದಿ ಹೇಳಿದ ಮೇಲಿನ ದೋಷಾರೋಪಣೆ ಅರ್ಥವಾಯಿತೇ?

ಉಃ ಅರ್ಥವಾಯಿತು

ಪ್ರಃ 2) ಅಪರಾಧವನ್ನು ಒಪ್ಪಿಕೊಳ್ಳುವಿರೋ ಅಥವಾ ಸಾಕ್ಷಿಗಳ ವಿಚಾರಣೆಯಾಗ ಬಯಸುವಿರಾ?

ಉಃ ಒಪ್ಪಿಕೊಳ್ಳುತ್ತೇನೆ

ಆರೋಪಿಯ ವಿರುದ್ಧ ದೋಷಾರೋಪಣೆ ರಚಿಸಿ ನೇರವಾಗಿ ಓದಿ ತಿಳಿಸಿದ ನಂತರ ಆತನು ಕೊಟ್ಟ ಉತ್ತರವನ್ನೇ ಸರಿಯಾಗಿ ಪಡೆದುಕೊಳ್ಳಲಾಯಿತೆಂದು ದೃಢೀಕರಿಸಿದೆ.

ದಿಃ 19-01-2026

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು,
ಕೆ ಆರ್ ನಗರ.

**ಆರೋಪಿಯ ಸಹಿಃ**